**ಕರ್ನಾಟಕ ವಿಧಾನಸಭೆ**
**ಹದಿನೈದನೇ ವಿಧಾನಸಭೆ**
**ಹನ್ನೆರಡನೇ ಅಧಿವೇಶನ**

# ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2022

**(2022ರ ವಿಧಾನಸಭೆಯ ವಿಧೇಯಕ ಸಂಖ್ಯೆ–10)**

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ನ್ನು (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ,-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2022 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 12ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ (1993ರ ಕರ್ನಾಟಕ ಅಧಿನಿಯಮ 14) (ಇಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 12ನೇ ಪ್ರಕರಣದಲ್ಲಿನ (ಡಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಡಿ-1) ಅವನು ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಸೇವೆಯಿಂದ ಕಡ್ಡಾಯ ನಿವೃತ್ತಿಗೆ ಅಥವಾ ತೆಗೆದುಹಾಕುವುದಕ್ಕೆ ಅಥವಾ ವಜಾಗೊಳಿಸುವುದಕ್ಕೆ ಒಳಪಟ್ಟಿದ್ದರೆ; ಅಥವಾ

(ಡಿ-2) ಆತನು ಸಹಕಾರ ಸಂಘ ಮತ್ತು ಸಂಸ್ಥೆಗಳ ಸೇವೆಯಿಂದ ಕಡ್ಡಾಯ ನಿವೃತ್ತಿಗೆ ಅಥವಾ ತೆಗೆದುಹಾಕುವುದಕ್ಕೆ ಅಥವಾ ವಜಾಗೊಳಿಸುವುದಕ್ಕೆ ಒಳಪಟ್ಟಿದ್ದರೆ ಅಥವಾ ಆತನನ್ನು ಸಹಕಾರ ಸಂಘ ಮತ್ತು ಸಂಸ್ಥೆಗಳ ಅಧ್ಯಕ್ಷ ಹಾಗೂ ಸದಸ್ಯತ್ವ ಹುದ್ದೆಯಿಂದ ತೆಗೆದುಹಾಕಲಾಗಿದ್ದರೆ; ಅಥವಾ"

**3. 121ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 121ನೇ ಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"**121.ಚುನಾಯಿತ ಸದಸ್ಯರು.-** ತಾಲ್ಲೂಕು ಪಂಚಾಯಿತಿಯ ಚುನಾಯಿತ ಸದಸ್ಯರ ಸಂಖ್ಯೆಯು, ಸಾಧ್ಯವಾದಷ್ಟು ಮಟ್ಟಿಗೆ, ಸರ್ಕಾರವು ಗ್ರಾಮೀಣ ಜನಸಂಖ್ಯೆಯ ಅಥವಾ ಅದರ ಆಧಾರದ ಮೇಲೆ ಕಾಲಕಾಲಕ್ಕೆ ಅಧಿಸೂಚಿಸಬಹುದಾದಂತೆ ತಾಲ್ಲೂಕಿನಲ್ಲಿರುವ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳಿಂದ ಈ ಕೆಳಕಂಡಂತೆ ಚುನಾಯಿತ ಸದಸ್ಯರನ್ನು ಒಳಗೊಂಡಿರತಕ್ಕದ್ದು,-

(i) ಎರಡು ಲಕ್ಷಗಳನ್ನು ಮೀರಿದ ಗ್ರಾಮೀಣ ಜನಸಂಖ್ಯೆಯನ್ನು ಹೊಂದಿರುವ ತಾಲ್ಲೂಕುಗಳಲ್ಲಿ ಪ್ರತಿ ಹನ್ನೆರಡು ಸಾವಿರಕ್ಕೆ ಕಡಿಮೆಯಲ್ಲದ ಜನಸಂಖ್ಯೆಗೆ ಒಬ್ಬ ಚುನಾಯಿತ ಸದಸ್ಯನು ಇರತಕ್ಕದ್ದು;

(ii) ಒಂದು ಲಕ್ಷವನ್ನು ಮೀರಿದ ಆದರೆ ಎರಡು ಲಕ್ಷಗಳನ್ನು ಮೀರಿರದ ಗ್ರಾಮೀಣ ಜನಸಂಖ್ಯೆಯನ್ನು ಹೊಂದಿರುವ ತಾಲ್ಲೂಕುಗಳಲ್ಲಿ ಪ್ರತಿ ಹತ್ತು ಸಾವಿರಕ್ಕೆ ಕಡಿಮೆಯಲ್ಲದ ಜನಸಂಖ್ಯೆಗೆ ಒಬ್ಬ ಚುನಾಯಿತ ಸದಸ್ಯನು ಇರತಕ್ಕದ್ದು ಹಾಗೂ ಅಲ್ಲಿ ಕನಿಷ್ಠ ಹನ್ನೊಂದು ಚುನಾಯಿತ ಸದಸ್ಯರಿರತಕ್ಕದ್ದು; ಮತ್ತು

(iii) ಐವತ್ತು ಸಾವಿರವನ್ನು ಮೀರಿದ ಆದರೆ ಒಂದು ಲಕ್ಷವನ್ನ ಮೀರಿರದ ಗ್ರಾಮೀಣ ಜನಸಂಖ್ಯೆಯನ್ನು ಹೊಂದಿರುವ ತಾಲ್ಲೂಕುಗಳಲ್ಲಿ ಕನಿಷ್ಠ ಒಂಬತ್ತು ಚುನಾಯಿತ ಸದಸ್ಯರಿರತಕ್ಕದ್ದು;

(iv) ಐವತ್ತು ಸಾವಿರಕ್ಕಿಂತ ಕಡಿಮೆಯಿರುವ ಗ್ರಾಮೀಣ ಜನಸಂಖ್ಯೆಯನ್ನು ಹೊಂದಿರುವ ತಾಲ್ಲೂಕುಗಳಲ್ಲಿ ಕನಿಷ್ಠ ಏಳು ಚುನಾಯಿತ ಸದಸ್ಯರಿರತಕ್ಕದ್ದು."

**4. 128ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 128ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿನ (ಇ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಇ-1) ಅವನು ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಸೇವೆಯಿಂದ ಕಡ್ಡಾಯ ನಿವೃತ್ತಿ ಅಥವಾ ತೆಗೆದುಹಾಕುವುದಕ್ಕೆ ಅಥವಾ ವಜಾಗೊಳಿಸುವುದಕ್ಕೆ ಒಳಪಟ್ಟಿದ್ದರೆ; ಅಥವಾ

(ಇ-2) ಸಹಕಾರ ಸಂಘ ಮತ್ತು ಸಂಸ್ಥೆಗಳ ಅಧ್ಯಕ್ಷ ಹಾಗೂ ಸದಸ್ಯತ್ವ ಹುದ್ದೆಯಿಂದ ಆತನನ್ನು ತೆಗೆದುಹಾಕಲಾಗಿದ್ದರೆ ಮತ್ತು ನೌಕರರು ಕಡ್ಡಾಯ ನಿವೃತ್ತಿ ಅಥವಾ ತೆಗೆದುಹಾಕಲು ಅಥವಾ ವಜಾಗೊಳಿಸುವುದಕ್ಕೆ ಒಳಪಟಿದ್ದರೆ; ಅಥವಾ,"

**5. 160ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 160ನೇ ಪ್ರಕರಣದ ಪರಂತುಕದ ಬದಲಿಗೆ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ಚಿಕ್ಕಮಗಳೂರು (ತರೀಕೆರೆ, ಕಡೂರು, ಅಜ್ಜಂಪುರ ತಾಲ್ಲೂಕುಗಳನ್ನು ಹೊರತುಪಡಿಸಿ), ಉತ್ತರ ಕನ್ನಡ ಮತ್ತು ಕೊಡಗು ಜಿಲ್ಲೆಗಳ ಸಂದರ್ಭದಲ್ಲಿ ಪ್ರತಿ ಹದಿನೆಂಟು ಸಾವಿರದಿಂದ ಇಪ್ಪತ್ತೈದು ಸಾವಿರದ ನಡುವಣ ಗ್ರಾಮೀಣ ಜನಸಂಖ್ಯೆಗೆ ಅಥವಾ ಅದರ ಭಾಗಕ್ಕೆ ಒಬ್ಬ ಸದಸ್ಯನಿರತಕ್ಕದ್ದು."

**6. 167ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 167ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿನ (ಡಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಡಿ-1) ಅವನು ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಸೇವೆಯಿಂದ ಕಡ್ಡಾಯ ನಿವೃತ್ತಿಗೆ ಅಥವಾ ತೆಗೆದುಹಾಕುವುದಕ್ಕೆ ಅಥವಾ ವಜಾಗೊಳಿಸುವುದಕ್ಕೆ ಒಳಪಟ್ಟಿದ್ದರೆ; ಅಥವಾ

(ಡಿ-2) ಆತನು ಸಹಕಾರ ಸಂಘ ಮತ್ತು ಸಂಸ್ಥೆಗಳ ಸೇವೆಯಿಂದ ಕಡ್ಡಾಯ ನಿವೃತ್ತಿಗೆ ಅಥವಾ ತೆಗೆದುಹಾಕುವುದಕ್ಕೆ ಅಥವಾ ವಜಾಗೊಳಿಸುವುದಕ್ಕೆ ಒಳಪಟ್ಟಿದ್ದರೆ ಅಥವಾ ಆತನನ್ನು ಸಹಕಾರ ಸಂಘ ಮತ್ತು ಸಂಸ್ಥೆಗಳ ಅಧ್ಯಕ್ಷ ಹಾಗೂ ಸದಸ್ಯತ್ವ ಹುದ್ದೆಯಿಂದ ತೆಗೆದುಹಾಕಲಾಗಿದ್ದರೆ; ಅಥವಾ,"

**7. 308ಎಬಿ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 308ಎಬಿ ಪ್ರಕರಣದ (1)ನೇ ಉಪಪ್ರಕರಣದಲ್ಲಿ "ಸದಸ್ಯನನ್ನು ಆಯ್ಕೆ ಮಾಡುವಂತೆ ಚುನಾವಣಾ ಕ್ಷೇತ್ರವನ್ನು ಕೋರುವ ಅಧಿಸೂಚನೆಯನ್ನು ಹೊರಡಿಸಿದ ಕೂಡಲೇ, ಚುನಾವಣಾಧಿಕಾರಿಯು ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ" ಎಂಬ ಪದಗಳ ಬದಲಾಗಿ "ರಾಜ್ಯ ಚುನಾವಣಾ ಆಯೋಗವು ಸದಸ್ಯರನ್ನು ಚುನಾಯಿಸಲು

ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಿದ ಮೇಲೆ, ಜಿಲ್ಲಾಧಿಕಾರಿಯು ಅಧಿಕೃತ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಅಧಿಸೂಚಿಸತಕ್ಕದ್ದು.-" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**8. 310ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 310ನೇ ಪ್ರಕರಣದಲ್ಲಿ,-

(i) (2)ನೇ ಉಪಪ್ರಕರಣದ (ಎ) ಮತ್ತು (ಬಿ) ಖಂಡಗಳ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎ) ಸಂಬಂಧಪಟ್ಟ ಜಿಲ್ಲೆಯ ಉಸ್ತುವಾರಿ ಮಂತ್ರಿ – ಚೇರ್‌ಪರ್ಸನ್

(ಬಿ) ಜಿಲ್ಲಾ ಪಂಚಾಯತಿಯ ಅಧ್ಯಕ್ಷ – ಕೋ ಚೇರ್‌ಪರ್ಸನ್

(ಬಿ-1) ಜಿಲ್ಲಾ ಕೇಂದ್ರಗಳಲ್ಲಿ ಸಂಬಂಧಪಟ್ಟ ನಗರಪಾಲಿಕೆ ಅಥವಾ ಪೌರಸಭೆಗಳ ಮಹಾಪೌರ ಅಥವಾ ಅಧ್ಯಕ್ಷ - ವೈಸ್ ಚೇರ್‌ಪರ್ಸನ್."

(ii) (5)ನೇ ಉಪಪ್ರಕರಣವನ್ನು ಬಿಟ್ಟುಬಿಡತಕ್ಕದ್ದು.

**9. 310ಬಿ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 310ಬಿ ಪ್ರಕರಣದ (2)ನೇ ಉಪಪ್ರಕರಣದಲ್ಲಿನ ಕೋಷ್ಟಕದಲ್ಲಿ, "3"ನೇ ಕ್ರಮಸಂಖ್ಯೆ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

| | | |
|---|---|---|
| "3-ಎ | ವಿಶೇಷ ಆಹ್ವಾನಿತ | ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರು" |

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಈ ಮುಂದಿನವುಗಳಿಗಾಗಿ,-

(i) ಈ ಮುಂದಿನವರನ್ನು,-

(ಎ) ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಸೇವೆಯಿಂದ ಕಡ್ಡಾಯ ನಿವೃತ್ತಿಗೆ ಅಥವಾ ತೆಗೆದುಹಾಕುವುದಕ್ಕೆ ಅಥವಾ ವಜಾಗೊಳ್ಳುವುದಕ್ಕೆ ಒಳಪಟ್ಟಿರುವ ವ್ಯಕ್ತಿಯನ್ನು;

(ಬಿ) ಸಹಕಾರ ಸಂಘ ಮತ್ತು ಸಂಸ್ಥೆಯ ಸೇವೆಯಿಂದ ನಿವೃತ್ತಿಗೆ ಅಥವಾ ತೆಗೆದುಹಾಕುವುದಕ್ಕೆ ಅಥವಾ ವಜಾಗೊಳ್ಳುವುದಕ್ಕೆ ಒಳಪಟ್ಟಿರುವ ವ್ಯಕ್ತಿಯನ್ನು;

(ಸಿ) ಸಹಕಾರ ಸಂಘ ಮತ್ತು ಸಂಸ್ಥೆಯ ಅಧ್ಯಕ್ಷ ಮತ್ತು ಸದಸ್ಯತ್ವದ ಹುದ್ದೆಯಿಂದ ತೆಗೆದುಹಾಕುವುದಕ್ಕೆ ಒಳಪಟ್ಟಿರುವ ವ್ಯಕ್ತಿಯನ್ನು;

- ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಯ ಸದಸ್ಯನಾಗುವುದರಿಂದ ಅನರ್ಹಗೊಳಿಸಲು ;

(ii) ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆಗೆ ಜನಸಂಖ್ಯಾ ಮಿತಿಯನ್ನು ಕಲ್ಪಿಸಲು ಹಾಗೂ ಜನಸಂಖ್ಯೆಯ ಅನುಪಾತದ ಉದ್ದೇಶಕ್ಕಾಗಿ ಮಲೆನಾಡು ಪ್ರದೇಶದಿಂದ ತರೀಕರೆ, ಕಡೂರು ಮತ್ತು ಅಜ್ಜಂಪುರ ತಾಲ್ಲೂಕುಗಳನ್ನು ವಿನಾಯಿತಿಗೊಳಿಸಲು;

(iii) ಜಿಲ್ಲಾ ಯೋಜನಾ ಸಮಿತಿಯ ಚೇರ್‌ಪರ್ಸನ್ ಆಗಿ ಸಂಬಂಧಪಟ್ಟ ಜಿಲ್ಲಾ ಉಸ್ತುವಾರಿ ಮಂತ್ರಿಯನ್ನು ನೇಮಿಸಲು ;

(iv) ಜಿಲ್ಲಾ ಕೇಂದ್ರಗಳಲ್ಲಿನ ಸಂಬಂಧಪಟ್ಟ ನಗರಪಾಲಿಕೆ ಅಥವಾ ಪೌರಸಭೆಗಳ ಮಹಾಪೌರ ಅಥವಾ ಅಧ್ಯಕ್ಷರನ್ನು ಜಿಲ್ಲಾ ಯೋಜನಾ ಸಮಿತಿಯ ವೈಸ್-ಚೇರ್‌ಪರ್ಸನ್ ಆಗಿ ನೇಮಿಸಲು;

(v) ಕರ್ನಾಟಕ ರಾಜ್ಯ ವಿಕೇಂದ್ರಿಕೃತ ಯೋಜನಾ ಮತ್ತು ಅಭಿವೃದ್ಧಿ ಸಮಿತಿಯ ವಿಶೇಷ ಆಹ್ವಾನಿತರನ್ನಾಗಿ ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರನ್ನು ಆಹ್ವಾನಿಸಲು ; ಮತ್ತು

(vi) ಕೆಲವು ಇತರ ಆನುಷಂಗಿಕ ತಿದ್ದುಪಡಿಗಳನ್ನು ಸಹ ತರಲು,

– ಕರ್ನಾಟಕ ಗ್ರಾಮ ಸ್ವರಾಜ್ಯ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 (1993 ರ ಕರ್ನಾಟಕ ಅಧಿನಿಯಮ 14) ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

# **ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಕೆ.ಎಸ್. ಈಶ್ವರಪ್ಪ**
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ(ಪ್ರ)
ಕರ್ನಾಟಕ ವಿಧಾನಸಭೆ

## ಅನುಬಂಧ

## ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ (1993ರ ಕರ್ನಾಟಕ ಅಧಿನಿಯಮ 14) ಉದ್ಧೃತ ಭಾಗ

**Xx xx xx**

**12. ಸದಸ್ಯರಾಗಲು ಅನರ್ಹತೆ.-** ಒಬ್ಬ ವ್ಯಕ್ತಿಯು, ಗ್ರಾಮ ಪಂಚಾಯತಿಯ ಸದಸ್ಯನಾಗಿ ಚುನಾಯಿತನಾಗಲು ಮತ್ತು ಸದಸ್ಯನಾಗಿರಲು,-

(ಎ) ಅವನನ್ನು ರಾಜ್ಯ ವಿಧಾನಮಂಡಲಗಳಿಗೆ ನಡೆಯುವ ಚುನಾವಣೆಯ ಉದ್ದೇಶಗಳಿಗಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಅಡಿಯಲ್ಲಿ ಹಾಗೆ ಅನರ್ಹಗೊಳಿಸಿದ್ದರೆ:

ಪರಂತು, ಯಾವ ವ್ಯಕ್ತಿಯನ್ನು ಅವನು ಇಪ್ಪತ್ತೊಂದು ವರ್ಷ ವಯಸ್ಸಿನವನಾಗಿದ್ದರೆ, ಅವನು ಇಪ್ಪತ್ತೈದು ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನವನೆಂಬ ಕಾರಣಕ್ಕಾಗಿ ಅನರ್ಹಗೊಳಿಸತಕ್ಕದ್ದಲ್ಲ;

(ಬಿ) 1965ರ ಕರ್ನಾಟಕ ಅಬ್ಕಾರಿ ಅಧಿನಿಯಮದ (1966ರ ಕರ್ನಾಟಕ ಅದಿನಿಯಮ 21) ಅಡಿಯಲ್ಲಿನ ಅಪರಾಧದ ಸಂಬಂಧದಲ್ಲಿ ಕ್ರಿಮಿನಲ್ ನ್ಯಾಯಾಲಯವು ಅವನಿಗೆ ಮೂರು ತಿಂಗಳನ್ನು ಮೀರಿದ ಅವಧಿಯ ಕಾರವಾಸದ ಶಿಕ್ಷೆಯನ್ನು ವಿಧಿಸಿದ್ದರೆ, ಅಂಥ ಶಿಕ್ಷೆಯನ್ನು ನಂತರ, ವ್ಯತಿರಿಕ್ತಗೊಳಿಸಿರದಿದ್ದರೆ ಅಥವಾ ರದ್ದುಗೊಳಿಸಿರದಿದ್ದರೆ ಅಥವಾ ಆ ಅಪರಾಧವನ್ನು ಮನ್ನಿಸಿರದಿದ್ದರೆ; ಅಥವಾ

(ಸಿ) 1973ರ ದಂಡ ಪ್ರಕ್ರಿಯಾ ಸಂಹಿತೆಯ (ಕೇಂದ್ರಾಧಿನಿಯಮ 1974ರ 2) 110ನೇ ಪ್ರಕರಣದ ಅಡಿಯಲ್ಲಿ ಹೂಡಿದ ವ್ಯವಹರಣೆಗಳಲ್ಲಿ ಆ ಸಂಹಿತೆಯ 117ನೇ ಪ್ರಕರಣದ ಅಡಿಯಲ್ಲಿ ಅವನ ವಿರುದ್ಧ ಆದೇಶವನ್ನು ಮಾಡಿದ್ದರೆ, ಅಂಥ ಆದೇಶವನ್ನು ವ್ಯತಿರಿಕ್ತಗೊಳಿಸಿರದಿದ್ದರೆ, ರದ್ದುಗೊಳಿಸಿರದಿದ್ದರೆ; ಅಥವಾ

(ಡಿ) ಅವನನ್ನು ಯಾವುದೇ ಸ್ಥಳೀಯ ಪ್ರಾಧಿಕಾರದ ಅಧೀನದಲ್ಲಿರುವ ಸೇವೆಯಿಂದ ವಜಾ ಮಾಡಿದ್ದರೆ; ಅಥವಾ **Xx xx xx**

-ಅನರ್ಹನಾಗತಕ್ಕದ್ದು.

**Xx xx xx**

**121. ಚುನಾಯಿತ ಸದಸ್ಯರು.-** ತಾಲ್ಲೂಕು ಪಂಚಾಯತಿಯ ಚುನಾಯಿತ ಸದಸ್ಯರ ಸಂಖ್ಯೆಯು, ರಾಜ್ಯ ಚುನಾವಣಾ ಆಯೋಗದಿಂದ ಕಾಲಕಾಲಕ್ಕೆ ಅಧಿಸೂಚಿಸಲಾಗುವ ತಾಲ್ಲೂಕಿನ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳಿಂದ, ತಾಲ್ಲೂಕಿನ ಪ್ರತಿ ಹನ್ನೆರಡು ಸಾವಿರದ ಐದುನೂರು ಮತ್ತು ಹದಿನೈದು ಸಾವಿರ ಈ ನಡುವಣ ಜನಸಂಖ್ಯೆಗೆ ಅಥವಾ ಅದರ ಭಾಗಕ್ಕೆ ಒಬ್ಬ ಸದಸ್ಯನಂತೆ ಚುನಾಯಿತರಾದ ವ್ಯಕ್ತಿಗಳನ್ನು ಒಳಗೊಂಡಿರತಕ್ಕದ್ದು:

ಪರಂತು, ಒಂದು ಲಕ್ಷಕ್ಕಿಂತ ಹೆಚ್ಚಿಲ್ಲದ ಜನಸಂಖ್ಯೆ ಇರುವ ತಾಲ್ಲೂಕುಗಳಿಗೆ ಕನಿಷ್ಠ ಹನ್ನೊಂದು ಮಂದಿ ಚುನಾಯಿತ ಸದಸ್ಯರಿರತಕ್ಕದ್ದು.

**Xx xx xx**

**128. ಸದಸ್ಯನಾಗಲು ಅನರ್ಹತೆ.-** (1) ಒಬ್ಬ ವ್ಯಕ್ತಿಯು, ತಾಲ್ಲೂಕು ಪಂಚಾಯತಿಯ ಸದಸ್ಯನಾಗಿ ಚುನಾಯಿತನಾಗಲು ಮತ್ತು ಸದಸ್ಯನಾಗಿರು,-

(ಎ) ರಾಜ್ಯ ವಿಧಾನ ಮಂಡಲಕ್ಕೆ ನಡೆಯುವ ಚುನಾವಣೆಗಳ ಉದ್ದೇಶಗಳಿಗಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಿಂದ ಅಥವಾ ಅದರ ಅಡಿಯಲ್ಲಿ ಅನರ್ಹನಾಗಿದ್ದರೆ:

ಪರಂತು, ಯಾವ ವ್ಯಕ್ತಿಯು ಅವನು ಇಪ್ಪತ್ತೊಂದು ವರ್ಷ ವಯಸ್ಸಿನವನಾಗಿದ್ದರೆ, ಅವನು ಇಪ್ಪತ್ತೈದು ವರ್ಷ ವಯಸ್ಸಿಗಿಂತ ಕಡಿಮೆ ವಯಸ್ಸಿನವನೆಂಬ ಕಾರಣಕ್ಕಾಗಿ ಅನರ್ಹನಾಗತಕ್ಕದ್ದಲ್ಲ;

(ಬಿ) ಅವನು, 1987ರ ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ಪಕ್ಷಾಂತರ ನಿಷೇಧ) ಅಧಿನಿಯಮದ ಅಡಿಯಲ್ಲಿ ಅನರ್ಹನಾಗಿದ್ದರೆ; ಅಥವಾ

(ಸಿ) 1965ರ ಕರ್ನಾಟಕ ಅಬ್ಕಾರಿ ಅಧಿನಿಯಮದ (1966ರ ಕರ್ನಾಟಕ ಅದಿನಿಯಮ 21) ಅಡಿಯಲ್ಲಿನ ಅಪರಾಧದ ಸಂಬಂಧದಲ್ಲಿ ಕ್ರಿಮಿನಲ್ ನ್ಯಾಯಾಲಯವು ಅವನಿಗೆ ಮೂರು ತಿಂಗಳು ವಿÆರಿದ ಅವಧಿಯ ಕಾರವಾಸದ ಶಿಕ್ಷೆಯನ್ನು ವಿಧಿಸಿದ್ದರೆ, ಅಂಥ ಶಿಕ್ಷೆಯನ್ನು ಆ ತರುವಾಯ, ವ್ಯತಿರಿಕ್ತಗೊಳಿಸಿರದಿದ್ದರೆ ಅಥವಾ ರದ್ದುಗೊಳಿಸಿರದಿದ್ದರೆ ಅಥವಾ ಅಪರಾಧವನ್ನು ಮನ್ನಿಸಿಲ್ಲದಿದ್ದಲ್ಲಿ; ಅಥವಾ

(ಡಿ) 1973ರ ದಂಡ ಪ್ರಕ್ರಿಯಾ ಸಂಹಿತೆಯ (ಕೇಂದ್ರಾಧಿನಿಯಮ 1974ರ 2) 11ಂನೇ ಪ್ರಕರಣದ ಅಡಿಯಲ್ಲಿ ಹೂಡಿದ ವ್ಯವಹರಣೆಗಳಲ್ಲಿ ಆ ಸಂಹಿತೆಯ 117ನೇ ಪ್ರಕರಣದ ಅಡಿಯಲ್ಲಿ ಅವನ ವಿರುದ್ಧ ಆದೇಶವನ್ನು ಮಾಡಿದ್ದರೆ, ಅಂಥ ಆದೇಶವನ್ನು ತರುವಾಯ ವ್ಯತಿರಿಕ್ತಗೊಳಿಸಿರದಿದ್ದರೆ, ಅಥವಾ ರದ್ದುಗೊಳಿಸಿರದಿದ್ದರೆ; ಅಥವಾ

(ಇ) ಅವನನ್ನು ಯಾವುದೇ ಸ್ಥಳೀಯ ಪ್ರಾಧಿಕಾರದ ಅಧೀನದ ಸೇವೆಯಿಂದ ವಜಾ ಮಾಡಿದ್ದರೆ; ಅಥವಾ

**Xx xx xx**

-ಅನರ್ಹನಾಗತಕ್ಕದ್ದು.

**Xx xx xx**

**160. ಚುನಾಯಿತ ಸದಸ್ಯರು.-** ಜಿಲ್ಲಾ ಪಂಚಾಯತಿಯ ಚುನಾಯಿತ ಸದಸ್ಯರಲ್ಲಿ ಜಿಲ್ಲೆಯ ತಾಲೂಕುಗಳಿಂದ ಚುನಾಯಿತರಾದ ಇಪ್ಪತ್ತಕ್ಕಿಂತಲೂ ಕಡಿಮೆಯಲ್ಲದಂತೆ ವ್ಯಕ್ತಿಗಳಿರತಕ್ಕದ್ದು, ಪ್ರತಿಯೊಂದು ತಾಲೂಕಿನಿಂದ ಚುನಾಯಿತರಾಗತಕ್ಕ ಸದಸ್ಯರ ಸಂಖ್ಯೆಯನ್ನು ಮೂವತ್ತೈ ಸಾವಿರ ಮತ್ತು ನಲವತ್ತೆöÊದು ಸಾವಿರದ ಜನಸಂಖ್ಯೆಯ ನಡುವಣ ಪ್ರತಿಯೊಂದು ಜನಸಂಖ್ಯೆಗೆ ಅಥವಾ ಅದರ ಭಾಗಕ್ಕೆ ಒಬ್ಬ ಸದಸ್ಯನಂತೆ ಸರ್ಕಾರದಿಂದ ನಿಗದಿಪಡಿಸಲಾಗಿದೆ:

ಪರಂತು,

(i) ಉತ್ತರ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆಯ ಸಂದರ್ಭದಲ್ಲಿ ಜನಸಂಖ್ಯೆಯ ಪ್ರತೀ ಮೂವತ್ತು ಸಾವಿರಕ್ಕೆ ಅಥವಾ ಅದರ ಭಾಗಕ್ಕೆ ಒಬ್ಬರು ಸದಸ್ಯರಿರತಕ್ಕದ್ದು;

(ii) xxx

(iii) ಕೊಡಗು ಜಿಲ್ಲೆಯ ಸಂದರ್ಭದಲ್ಲಿ, ಜನಸಂಖ್ಯೆಯ ಪ್ರತೀ ಹದಿನೆಂಟು ಸಾವಿರಕ್ಕೆ ಅಥವಾ ಅದರ ಭಾಗಕ್ಕೆ ಒಬ್ಬರ ಸದಸ್ಯರಿರತಕ್ಕದ್ದು.

**Xx** **xx** **xx**

**167. ಸದಸ್ಯರಾಗು ಅನರ್ಹತೆ.-** (1) ಒಬ್ಬ ವ್ಯಕ್ತಿಯು, ಜಿಲ್ಲಾ ಪಂಚಾಯತಿಯ ಸದಸ್ಯನಾಗಿ ಚುನಾಯಿತನಾಗಲು ಮತ್ತು ಸದಸ್ಯನಾಗಿರಲು,-

(ಎ) ಅವನು, ರಾಜ್ಯ ವಿಧಾನಮಂಡಲಗಳಿಗಾಗಿ ನಡೆಯುವ ಚುನಾವಣೆ ಉದ್ದೇಶಗಳಿಗಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಅದರಡಿಯಲ್ಲಿ ಹಾಗೆ ಅನರ್ಹನಾಗಿದ್ದರೆ:

ಪರಂತು, ಯಾವ ವ್ಯಕ್ತಿಯೂ ಅವನು ಇಪ್ಪತ್ತೊಂದು ವರ್ಷಗಳ ವಯಸ್ಸಿನವನಾಗಿದ್ದರೆ ಅವನು ಇಪ್ಪತ್ತೈದು ವರ್ಷಗಳಿಗಿಂತಲೂ ಕಡಿಮೆ ವಯಸ್ಸಿನವನೆಂಬ ಕಾರಣಕ್ಕಾಗಿ ಅನರ್ಹನಾಗತಕ್ಕದ್ದಲ್ಲ;

(ಬಿ) 1965ರ ಕರ್ನಾಟಕ ಅಬಕಾರಿ ಅಧಿನಿಯಮದಡಿಯ (1966ರ ಕರ್ನಾಟಕ ಅಧಿನಿಯಮ ಸಂಖ್ಯೆ 21) ಅಪರಾಧದ ಸಂಬಂಧದಲ್ಲಿ ಕ್ರಿಮಿನಲ್ ನ್ಯಾಯಾಲಯವು ಆತನಿಗೆ ಮೂರು ತಿಂಗಳನ್ನು ವಿÆರಿದ ಅವಧಿಗೆ ಕಾರಾವಾಸ ಶಿಕ್ಷೆಯನ್ನು ವಿಧಿಸಿದ್ದರೆ ಅಂಥ ಶಿಕ್ಷೆಯನ್ನು ತರುವಾಯ ವ್ಯತಿರಿಕ್ತಗೊಳಿಸಿರದಿದ್ದರೆ, ರದ್ದುಗೊಳಿಸಿರದಿದ್ದರೆ ಅಥವಾ ಅಪರಾಧವನ್ನು ಮನ್ನಿಸಿರದಿದ್ದರೆ; ಅಥವಾ

(ಸಿ) 1973ರ ದಂಡ ಪ್ರಕ್ರಿಯಾ ಸಂಹಿತೆಯ (1974ರ ಕೇಂದ್ರ ಅಧಿನಿಯಮ 2) 11ಂನೇ ಪ್ರಕರಣದಡಿ ಹೂಡಿದ ವ್ಯವಹರಣೆಗಳಲ್ಲಿ ಆ ಸಂಹಿತೆಯ 117ನೇ ಪ್ರಕರಣದಡಿ ಆತನ ವಿರುದ್ಧ ಆದೇಶವನ್ನು ಮಾಡಿದ್ದರೆ, ಅಂಥ ಆದೇಶವನ್ನು ವ್ಯತಿರಿಕ್ತಗೊಳಿಸಿರದಿದ್ದರೆ ಅಥವಾ ರದ್ದುಗೊಳಿಸಿರದಿದ್ದರೆ; ಅಥವಾ

(ಡಿ) ಯಾವುದೇ ಸ್ಥಳೀಯ ಪ್ರಾಧಿಕಾರದ ಅಧೀನದ ಸೇವೆಯಿಂದ ಆತನನ್ನು ವಜಾ ಮಾಡಿದ್ದರೆ; ಅಥವಾ

**Xx** **xx** **xx**

-ಅನರ್ಹನಾಗತಕ್ಕದ್ದು.

**Xx** **xx** **xx**

**308ಎಬಿ. ನಾಮ ಪತ್ರಗಳನ್ನು ಸಲ್ಲಿಸುವುದು ಮೊದಲಾದವುಗಳಿಗಾಗಿ ದಿನಾಂಕಗಳ ಅಧಿಸೂಚನೆ.-** (1) ಸದಸ್ಯನನ್ನು ಆಯ್ಕೆ ಮಾಡುವಂತೆ ಚುನಾವಣಾ ಕ್ಷೇತ್ರವನ್ನು ಕೋರುವ ಅಧಿಸೂಚನೆಯನ್ನು ಹೊರಡಿಸಿದ ಕೂಡಲೇ, ಚುನಾವಣಾಧಿಕಾರಿಯು ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ,-

(ಎ) ನಾಮ ಪತ್ರಗಳನ್ನು ಸಲ್ಲಿಸುವುದಕ್ಕೆ ಕೊನೆಯ ದಿನಾಂಕವನ್ನು ಗೊತ್ತುಪಡಿಸತಕ್ಕದ್ದು, ಆ ಕೊನೆಯ ದಿನಾಂಕವು ಮೊದಲು ಹೇಳಿರುವ ಅಧಿಸೂಚನೆಯ ಪ್ರಕಟಣೆಯ ದಿನಾಂಕದ ತರುವಾಯ ಬರುವ ನಾಲ್ಕನೆಯ ಕೆಲಸದ ದಿನವಾಗಿರತಕ್ಕದ್ದು ಅಥವಾ ಆ ದಿನವು ಸಾರ್ವಜನಿಕ ರಜಾ ದಿನವಾಗಿದ್ದರೆ, ಸಾರ್ವತ್ರಿಕ ರಜಾ ದಿನವಾಗಿರದ, ತರುವಾಯ ಬರುವ ದಿನವಾಗಿರತಕ್ಕದ್ದು;

(ಬಿ) ನಾಮಪತ್ರಗಳ ಪರಿಶೀಲನೆಗೆ ದಿನಾಂಕವನ್ನು ಗೊತ್ತುಪಡಿಸತಕ್ಕದ್ದು. ಆ ದಿನಾಂಕವು ನಾಮಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕಕ್ಕೆ ನಿಕಟ ತರುವಾಯದ ದಿನವಾಗಿರತಕ್ಕದ್ದು ಅಥವಾ ಆ ದಿನವು ಸಾರ್ವಜನಿಕ ರಜಾ ದಿನವಾಗಿದ್ದರೆ, ಸಾರ್ವತ್ರಿಕ ರಜಾ ದಿನವಾಗಿರದ ತರುವಾಯ ಬರುವ ದಿನವಾಗಿರತಕ್ಕದ್ದು;

(ಸಿ) ನಾಮಪತ್ರಗಳನ್ನು ವಾಪಸ್ಸು ಪಡೆಯುವುದಕ್ಕೆ ಕೊನೆಯ ದಿನಾಂಕವನ್ನು ಗೊತ್ತುಪಡಿಸತಕ್ಕದ್ದು. ಆ ಕೊನೆಯ ದಿನಾಂಕವು ನಾಮಪತ್ರಗಳ ಪರಿಶೀಲನೆಗೆ ಗೊತ್ತುಪಡಿಸಿರುವ ದಿನಾಂಕದ ತರುವಾಯದ ಎರಡನೆಯ ದಿನವಾಗಿರತಕ್ಕದ್ದು ಅಥವಾ ಆ ದಿನವು ಸಾರ್ವಜನಿಕ ರಜಾ ದಿನವಾಗಿದ್ದರೆ, ಸಾರ್ವತ್ರಿಕ ರಜಾ ದಿನವಾಗಿರದ ತರುವಾಯ ಬರುವ ದಿನವಾಗಿರತಕ್ಕದ್ದು;

(ಡಿ) ಮತದಾನವು, ಅವಶ್ಯವಾದರೆ, ಮತದಾನಕ್ಕೆ ದಿನಾಂಕವನ್ನು ಅಥವಾ ದಿನಾಂಕಗಳನ್ನು ಗೊತ್ತುಪಡಿಸತಕ್ಕದ್ದು ಅಥವಾ ಆ ಪೈಕಿ ಮೊದಲನೆಯ ದಿನಾಂಕವು ಗ್ರಾಮ ಪಂಚಾಯತ್‌ಗೆ ನಡೆಯುವ ಚುನಾವಣೆ ಸಂದರ್ಭದಲ್ಲಿ, ಐದನೆಯ ದಿನಕ್ಕೆ ಮುಂಚಿನದಲ್ಲದ ದಿನಾಂಕವಾಗಿರತಕ್ಕದ್ದು ಮತ್ತು ತಾಲ್ಲೂಕು ಪಂಚಾಯತ್‌ಗಳಿಗೆ ಮತ್ತು ಜಿಲ್ಲಾ ಪಂಚಾಯತ್‌ಗೆ ಚುನಾವಣೆ ಸಂದರ್ಭದಲ್ಲಿ ಉಮೇದುವಾರಿಕೆಗಳನ್ನು ವಾಪಸ್ಸು ಪಡೆಯುವುದಕ್ಕೆ ನಿಗದಿ ಮಾಡಿದ ಕೊನೆಯ ದಿನಾಂಕದ ತರುವಾಯದ ಏಳನೆಯ ದಿನಕ್ಕೆ ಮುಂಚಿನದಲ್ಲದ ದಿನಾಂಕವಾಗಿರತಕ್ಕದ್ದು;

(ಇ) ಯಾವ ದಿನಾಂಕಕ್ಕೆ ಮುಂಚೆ ಚುನಾವಣೆಯನ್ನು ಮುಕ್ತಾಯಗೊಳಿಸತಕ್ಕದ್ದೋ ಆ ದಿನಾಂಕವನ್ನು ಗೊತ್ತುಪಡಿಸತಕ್ಕದ್ದು;

(ಎಫ್) ಪಂಚಾಯತ್‌ಗಳಿಗೆ ಸದಸ್ಯರ ಚುನಾವಣಾ ಪ್ರಕ್ರಿಯೆಯನ್ನು ಸಾಧ್ಯವಾಗಬಹುದಾದಷ್ಟರ ಮಟ್ಟಿಗೆ ಚುನಾವಣಾ ಅಧಿಸೂಚನೆಯನ್ನು ಹೊರಡಿಸಿದ ಹತ್ತು ಕೆಲಸದ ದಿನಗಳೊಳಗೆ ಮುಕ್ತಾಯಗೊಳಿಸತಕ್ಕದ್ದು.

**Xx xx xx**

**310. ಜಿಲ್ಲಾ ಯೋಜನಾ ಸಮಿತಿ.-** (1) ಸರ್ಕಾರವು, ಜಿಲ್ಲಾ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು ಮತ್ತು ಗ್ರಾಮ ಪಂಚಾಯತಿಗಳು ಮತ್ತು ಪಟ್ಟಣ ಪಂಚಾಯತಿಗಳು, ಜಿಲ್ಲೆಯಲ್ಲಿರುವ ಪುರಸಭಾ ಪರಿಷತ್ತುಗಳು ಮತ್ತು ನಗರ ಪೌರಸಭಾ ನಿಗಮಗಳ ಯೋಜನೆಗಳನ್ನು ಕ್ರೋಢೀಕರಿಸಲು ಮತ್ತು ಒಟ್ಟಾರೆ ಜಿಲ್ಲೆಗಾಗಿ ಒಂದು ಅಭಿವೃದ್ಧಿ ಯೋಜನೆಯ ಕರಡನ್ನು ತಯಾರಿಸಲು ಪ್ರತಿಯೊಂದು ಜಿಲ್ಲೆಗೂ ಒಂದೊಂದು ಜಿಲ್ಲಾ ಯೋಜನಾ ಸಮಿತಿಯನ್ನು ರಚಿಸತಕ್ಕದ್ದು.

(2) ಜಿಲ್ಲಾ ಯೋಜನಾ ಸಮಿತಿಯು ಈ ಮುಂದಿನವರನ್ನೊಳಗೊಂಡಿರತಕ್ಕದ್ದು, ಎಂದರೆ:-

| | | |
|---|---|---|
| (ಎ) | ಸಂಬಂಧಪಟ್ಟ ಜಿಲ್ಲೆಯ ಉಸ್ತುವಾರಿ ಸಚಿವರು | ಸದಸ್ಯರು |
| (ಬಿ) | ಜಿಲ್ಲಾ ಪಂಚಾಯತ್‌ನ ಅಧ್ಯಕ್ಷರು | ಸದಸ್ಯರು |
| (ಸಿ) | ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಪದನಿಮಿತ್ತ ಕೋ-ಚೇರ್‌ಪರ್ಸನ್ ಆಗಿರುವ ತಾಲ್ಲೂಕು ಪಂಚಾಯತಿಗಳ ಅಧ್ಯಕ್ಷರು | ಸದಸ್ಯರು |
| (ಡಿ) | ಜಿಲ್ಲೆಯಲ್ಲಿನ ಪ್ರತಿಯೊಂದು ತಾಲ್ಲೂಕಿನಿಂದ ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ವೈಸ್ ಚೇರ್ ಪರ್ಸನ್(ತಾಲ್ಲೂಕು ಗ್ರಾಮ ಪಂಚಾಯತ್ ಮೂಲಕ ಚುನಾಯಿತರಾದವರು) | ಸದಸ್ಯರು |

| | | |
|---|---|---|
| (ಇ) | ಜಿಲ್ಲಾ ಪಂಚಾಯತ್‌ಗಳು, ತಾಲ್ಲೂಕು ಪಂಚಾಯತಿಗಳು, ಪಟ್ಟಣ ಪಂಚಾಯಿತಿಗಳು ಮತ್ತು ಜಿಲ್ಲೆಯಲ್ಲಿನ ನಗರ ಪಾಲಿಕೆಗಳು ಮತ್ತು ಪೌರನಿಗಮಗಳ ಕೌನ್ಸಿಲರುಗಳು ತಮ್ಮ ಪೈಕಿಯಿಂದ ನಿಯಮಿಸಿದ ರೀತಿಯಲ್ಲಿ ಚುನಾಯಿತರಾದ, ಸರ್ಕಾರವು ನಿರ್ದಿಷ್ಟಪಡಿಸಬಹುದಾದ ಅಂಥ ಸಮಿತಿಯ ಸದಸ್ಯರ ಒಟ್ಟು ಸಂಖ್ಯೆಯ ಐದನೇ ನಾಲ್ಕಕ್ಕಿಂತ ಕಡಿಮೆಯಲ್ಲದ ಸದಸ್ಯರನ್ನು ಜಿಲ್ಲೆಯಲ್ಲಿನ ಗ್ರಾಮೀಣ ಪ್ರದೇಶಗಳು ಮತ್ತು ನಗರ ಪ್ರದೇಶಗಳ ಜನಸಂಖ್ಯೆಯ ನಡುವಣ ಧಾಮಾಷಾ ಪ್ರಮಾಣಕ್ಕೆ ಅನುಸಾರವಾಗಿ ಚುನಾಯಿಸತಕ್ಕದ್ದು. | ಸದಸ್ಯರು |

**Xx xx xx**

(5) ಜಿಲ್ಲಾ ಯೋಜನಾ ಸಮಿತಿಯ ಚೇರ್‌ಮನ್ನರನ್ನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಅವರುಗಳ ಪೈಕಿ ಆಯ್ಕೆ ಮಾಡತಕ್ಕದ್ದು.

**Xx xx xx**

**310ಬಿ. ಕರ್ನಾಟಕ ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ.-** (1) ಅಭಿವೃದ್ಧಿ ಯೋಜನೆಗಳನ್ನು ಮತ್ತು ಆಯವ್ಯಯ ದಸ್ತಾವೇಜಿನೊಂದಿಗೆ ಹಾಜರುಪಡಿಸಬೇಕಾದ ವಾರ್ಷಿಕ ಹಣಕಾಸು ಪುನರಾವಲೋಕನೆಯನ್ನು ರೂಪಿಸುವುದಕ್ಕೆ ಸರ್ಕಾರವನ್ನು ಸಮರ್ಥಗೊಳಿಸುವುದಕ್ಕೆ ಕರ್ನಾಟಕ ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯೆಂದು ಕರೆಯಲಾಗುವ ಸಮಿತಿಯನ್ನು ಸ್ಥಾಪಿಸತಕ್ಕದ್ದು.

(2) ಕರ್ನಾಟಕ ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿಯ ಈ ಮುಂದಿನವರನ್ನು ಒಳಗೊಂಡಿರತಕ್ಕದ್ದು, ಎಂದರೆ:-

| | | |
|---|---|---|
| 1. | ಚೇರ್‌ಪರ್ಸನ್ | ಮುಖ್ಯಮಂತ್ರಿ |
| 2. | ವೈಸ್‌ಚರ್‌ಮನ್ | 1) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು<br>2) ಹಣಕಾಸು ಸಚಿವರು<br>3) ಯೋಜನಾ ಸಚಿವರು<br>4) ನಗರಾಭಿವೃದ್ಧಿ ಸಚಿವರು,<br>ಸರ್ಕಾರವು ನಾಮನಿರ್ದೇಶಿಸಿದ ಸಮಾಜೋ ಆರ್ಥಿಕ ಅಭಿವೃದ್ಧಿಯ ಕ್ಷೇತ್ರದಲ್ಲಿ ತಜ್ಞರಾದ ಒಬ್ಬರು ಸರ್ಕಾರೇತರ ಸದಸ್ಯರು |
| 3. | ಸದಸ್ಯರು | 1) ರಾಜ್ಯದ ಅಭಿವೃದ್ಧಿ ಆಯುಕ್ತರು<br>2) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ<br>3) ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ<br>4) ಆರ್ಥಿಕ ಇಲಾಖೆಯ ಪ್ರಧಾನ ಕಾರ್ಯದರ್ಶಿ<br>5) ಸರ್ಕಾರವು ನಾಮನಿರ್ದೇಶನ ಮಾಡಿದ ಸ್ಥಳೀಯ ನಿಕಾಯಗಳನ್ನು ಪ್ರತಿನಿಧಿಸುವ ಇಬ್ಬರು ವಿಧಾನಪರಿಷತ್ ಸದಸ್ಯರು. |

| | | |
|---|---|---|
| | | 6) ಸರ್ಕಾರವು ನಾಮ ನಿರ್ದೇಶನ ಮಾಡಿದ ಎಂಟು ಸದಸ್ಯರು, ಅವರಲ್ಲಿ<br>(ಎ) ಜಿಲ್ಲಾ ಯೋಜನಾ ಸಮಿತಿಗಳ ಇಬ್ಬರು ಚೇರ್‌ಪರ್ಸನ್ಸ್ ಅವರಲ್ಲಿ ರೆವಿನ್ಯೂ ವಿಭಾಗದಿಂದ ಒಬ್ಬರು ಇರತಕ್ಕದ್ದು.<br>(ಬಿ) ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿಗಳ ಇಬ್ಬರು ಚೇರ್‌ಪರ್ಸನ್ಸ್ ಅವರಲ್ಲಿ ರೆವಿನ್ಯೂ ವಿಭಾಗದಿಂದ ಒಬ್ಬರು ಇರತಕ್ಕದ್ದು.<br>(ಸಿ) ಗ್ರಾಮ ಪಂಚಾಯತಿಗಳ ಇಬ್ಬರು ಚೇರ್‌ಪರ್ಸನ್ಸ್- ಅವರಲ್ಲಿ ರೆವಿನ್ಯೂ ವಿಭಾಗದಿಂದ ಒಬ್ಬರು ಇರತಕ್ಕದ್ದು.<br>(ಡಿ) ನಗರ ಸ್ಥಳೀಯ ನಿಕಾಯಗಳ ಇಬ್ಬರು ಚೇರ್‌ಪರ್ಸನ್ಸ್ ನಗರ ಪಾಲಿಕೆಗಳನ್ನು ಪ್ರತಿನಿಧಿಸುವ ಒಬ್ಬರು ಸಿಟಿ ಮುನ್ಸಿಪಲ್ ಕೌನ್ಸಿಲ್‌ಗಳನ್ನು ಪ್ರತಿನಿಧಿಸುವ ಒಬ್ಬರು ಅಥವಾ ಪಟ್ಟಣ ಪಂಚಾಯತ್‌ಗಳನ್ನು ಪ್ರತಿನಿಧಿಸುವ ಒಬ್ಬರು ಮತ್ತು ಪಟ್ಟಣ ಮುನ್ಸಿಪಾಲಿಟಿಗಳನ್ನು ಪ್ರತಿನಿಧಿಸುವ ಒಬ್ಬರು:<br>ಪರಂತು ಎಂಟರಲ್ಲಿ ಕನಿಷ್ಠ ಒಬ್ಬರು ಮಹಿಳೆಯಾಗಿರತಕ್ಕದ್ದು. ಅನುಸೂಚಿತ ಜಾತಿಗಳಿಂದ ಒಬ್ಬರು ಪ್ರತಿನಿಧಿ ಅನುಸೂಚಿತ ಪಂಗಡಗಳಿಂದ ಒಬ್ಬರು ಪ್ರತಿನಿಧಿ, ಅಲ್ಪಸಂಖ್ಯಾತರ ಸಮುದಾಯವು ಒಳಗೊಂಡಂತೆ ಇತರ ಹಿಂದುಳಿದ ವರ್ಗಗಳ ಒಬ್ಬರು ಪ್ರತಿನಿಧಿ.<br>(ಇ) ತಜ್ಞರಾಗಿರುವ ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳ, ಕೈಗಾರಿಕೆ, ಗ್ರಾಮೀಣ ಮತ್ತು ನಗರಾಭಿವೃದ್ಧಿ, ಲಿಂಗ ಸಂಬಂಧಿ ವಿಷಯಗಳು (ಮಹಿಳೆಯಾಗಿರತಕ್ಕದ್ದು) ಮಕ್ಕಳ ಹಕ್ಕುಗಳು- ಮಕ್ಕಳ ಹಕ್ಕುಗಳ ಕಾರ್ಯಕರ್ತರು, ಆರ್ಥಿಕ, ಪಟ್ಟಣ ಮತ್ತು ಗ್ರಾಮ ಯೋಜನೆ ಮತ್ತು ಪರಿಸರ ಮತ್ತು ಜಲ ಸಂರಕ್ಷಣೆ ಈ ಕ್ಷೇತ್ರಗಳಿಂದ ಸರ್ಕಾರವು ನಾಮ ನಿರ್ದೇಶನ ಮಾಡಿದ ಐವರು ವ್ಯಕ್ತಿಗಳು. |
| 4 | ಸದಸ್ಯ ಕಾರ್ಯದರ್ಶಿ | ಯೋಜನಾ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಥವಾ ಸರ್ಕಾರದ ಕಾರ್ಯದರ್ಶಿ. |

**Xx** **xx** **xx**

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು, ಪಿ7, ಕಾಸೂ , ಪ್ರತಿಗಳು 500, 17ನೇ ಮಾರ್ಚ್ 2022

**KARNATAKA LEGISLATIVE ASSEMBLY**
**FIFTEENTH LEGISLATIVE ASSEMBLY**
**TWELFTH SESSION**

# THE KARNATAKA GRAM SWARAJ AND PANCHAYAT RAJ (AMENDMENT) BILL, 2022

**(LA Bill No. 10 of 2022)**

A Bill further to amend the Karnataka Gram Swaraj and Panchayat Raj Act, 1993.

Whereas, it is expedient further to amend the Karnataka Gram Swaraj and Panchayat Raj Act, 1993 (Karnataka Act 14 of 1993) for the purposes hereinafter appearing;

Be it enacted by the Karnataka State Legislature in the seventy third year of the Republic of India, as follows:-

**1. Short title and commencement.-** (1) This Act may be called the Karnataka Gram Swaraj and Panchayat Raj (Amendment) Act, 2022.

(2) It shall come into force at once.

**2. Amendment of section 12.-** In section 12 of the Karnataka Gram Swaraj and Panchayat Raj Act, 1993 (Karnataka Act 14 of 1993) (hereinafter referred to as the Principal Act), after clause (d) the following shall be inserted, namely:-

"(d-1) if he has been subject to compulsory retirement or removal or dismissal from the service of the Central Government or the State Government; or.

(d-2) if he has been subject to compulsory retirement or removal or dismissal from the service of the Co-operative Society and institutions or if, he has been removed from the post of Chairperson and membership of the Co-operative society and institutions; or,"

**3. Amendment of section 121.-** For section 121 of the Principal Act, the following shall be substituted, namely:-

"**121. Elected Members.-** The number of elected members of a Taluka Panchayath as far as possible shall consist of members elected from the territorial

constituencies in the Taluk as may be notified from time to time by the Government on the basis of rural population or thereof, as below,-

(i) Taluks having a rural population exceeding two lakhs, there shall be one elected member for every population of not less than twelve thousand;

(ii) Taluks having a rural population exceeding one lakh, but not exceeding two lakhs there shall be one elected member for every population of not less than ten thousand and there shall be a minimum of eleven elected members;

(iii) Taluks having a rural population exceeding fifty thousand but not exceeding one lakh, there shall be a minimum of nine elected members; and

(iv) Taluks having a rural population less than fifty thousand, there shall be a minimum of seven elected members."

**4. Amendment of section 128.-** In section 128 of the Principal Act, in sub section (1), after clause (e), the following shall be inserted, namely:-

"(e-1) if he has been subject to compulsory retirement or removal or dismissal from the service of the Central Government or the State Government; or."

(e-2) if he has been subject to compulsory retirement or removal or dismissal from the service of the Co-operative Society and institutions or if, he has been removed from the post of Chairperson and membership of the Co-operative society and institutions; or,"

**5. Amendment of section 160.-** In section 160 of the Principal Act, for the proviso, the following shall be substituted, namely:-

**"**Provided that, in case of Chikkamagalur (excluding Tarikere, Kaduru, Ajjampura Taluks) Uttara Kannada and Kodagu Districts it shall be one member for every rural population between eighteen thousand to twenty five thousand or part thereof."

**6. Amendment of section 167.-** In section 167 of the Principal Act, in sub section (1), after clause (d), the following shall be inserted, namely:-

"(d-1) if he has been subject to compulsory retirement or removal or dismissal from the service of the Central Government or the State Government; or."

(d-2) "if he has been subject to compulsory retirement or removal or dismissal from the service of the Co-operative Society and institutions or if, he has been removed from the post of Chairperson and membership of the Co-operative society and institutions; or,"

**7. Amendment of section 308AB.-** In section 308AB of the Principal Act, in sub section (1), for the words "As soon as the notification of election to elect a member is issued, the Returning Officer shall, by notification in the Official Gazette, notify," the words "On publication of the schedule of election to elect the members is published by the State Election Commission, the Deputy Commissioner shall by notification in the Official Gazette, notify." Shall be substituted.

**8. Amendment of section 310.-**In section 310 of the Principal Act,-

(i) in sub section (2), for clause (a) and (b) the following shall be substituted, namely:-

"(a) The Minister in charge of the concerned District- Chair-person

(b) The Adhyaksha of the Zilla Panchayat- Co-Chairperson

(b-1) The Mayor or the President of the concerned City Corporation or Municipalities at the District head quarters - Vice-Chairperson"

(ii) sub section (5) shall be omitted.

**9. Amendment of section 310B.-**In section 310B of the Principal Act, in sub-section (2), in the table, after serial number "3" and the entries relating thereto, the following shall be inserted, namely:-

"

| | | |
|---|---|---|
| 3-A | Special Invitee | Vice-Chairperson of the Karnataka State Policy and Planning Commission |

"

## STATEMENT OF OBJECTS AND REASONS

It is considered necessary to amend the Karnataka Grama Swaraj and Panchayat Raj Act, 1993 (Karnataka Act 14 of 1993) to,-

(i) disqualify a person,-

(a) who has been subject to compulsory retirement or removal or dismissal from the service of the Central Government or the State Government;

(b) who has been subject to compulsory retirement or removal or dismissal from the service of Co-operative Society and Institution;

(c) who has been subject to removed from the post of Chairperson and Membership of the Co-operative Society and Institution

from being a member of Grama Panchayat, Taluk Panchayat and Zilla Panchayat;

(ii) prescribe the population limit for election to the Taluk Panchayat and Zilla Panchayat and exclude the taluks of Tarikere, Kadur and Ajjampura from Chikkamagalur District for the purpose of population proportion;

(iii) appoint the Minister in-charge of the concerned District as the Chair-person of the District planning committee;

(iv) appoint the Mayor or President of the concerned City Corporation or the Municipalities at the District head quarters as the Vice-Chairperson of the District Planning Committee;

(v) invite the Vice-Chairperson of the Karnataka State Policy and Planning Commission as the special invitee of the Karnataka state decentralized planning and development committee; and

(vi) Certain consequential amendments are also made.

Hence the Bill.

## FINANCIAL MEMORANDUM

There is no extra expenditure involved in the proposed legislative measure.

**K. S. ESHWARAPPA**
Minister for Rural Development
and Panchayat Raj

**M.K. VISHALAKSHI**
Secretary (I/c)
Karnataka Legislative Assembly

**ANNEXURE**

**EXTRACT FROM THE KARNATAKA GRAM SWARAJ AND PANCHAYAT RAJ ACT, 1993 (KARNATAKA ACT 14 OF 1993)**

**XX XX XX**

**12. Disqualification for members.-** A person shall be disqualified for being chosen and for being a member of a Grama Panchayat,-

(a) if he is so disqualified by or under any law for the time being in force for the purposes of the elections to the State Legislatures:

Provided that no person shall be disqualified on the ground that he is less than twenty-five years, if he has attained the age of twenty-one year.

(b) if he has been sentenced by a criminal court to imprisonment for a term exceeding three months in respect of an offence under the Karnataka Excise Act, 1965 (Karnataka Act 21 of 1966), such sentence not having been subsequently reversed or quashed or the offence pardoned; or

(c) if an order has been passed against him under section 117 of the Code of Criminal Procedure, 1973 (Central Act 2 of 1974) in proceedings instituted under section 110 of the Code, such order not having been subsequently reversed or quashed; or

(d) if he has been dismissed from service under any local authority; or

**XX XX XX**

**121. Elected members.-** The number of elected members of a Taluk Panchayat shall consist of persons elected from the territorial constituencies in the Taluk as may be notified from time to time by the Government, at the rate of one member for every population between twelve thousand five hundred and fifteen thousand or part thereof, of the Taluk:

Provided that in Taluks having a population of not exceeding one lakh, there shall be a minimum of eleven elected members.

**XX XX XX**

**128. Disqualification for members.-** (1) A person shall be disqualified for being chosen and for being member of a Taluk Panchayat,-

(a) if he is so disqualified by or under any law for the time being in force for the purposes of the elections to the State Legislature:

Provided that no person shall be disqualified on the ground that he is less than twenty five years, if he has attained the age of twenty-one years;

(b) if he is disqualified under the Karnataka Local Authorities (Prohibition of Defection) Act, 1987; or

(c) if he has been sentenced by a criminal court to imprisonment for a term exceeding three months in respect of an offence under the Karnataka Excise Act, 1965 (Karnataka Act 21 of 1966), such sentence not having been subsequently reversed or quashed or the offence pardoned; or

(d) if an order has been passed against him under section 117 of the Code Of Criminal Procedure, 1973 (Central Act 2 of 1974) in proceedings instituted under section 110 of the code, such order not having been subsequently reversed or quashed; or

(e) if he has been dismissed from service under any local authority; or

**XX XX XX**

**160. Elected members.-** The elected members of the Zilla Panchayat shall consist of not less than twenty persons elected from the Taluks in the district, the number of members to be elected from each Taluk being fixed by the Government in accordance with the scale of one member for for every population between thirty five thousand and forty-five thousand or part thereof of the population:

Provided that in case of,-

(i) Uttara Kannada and Chickmagalur district it shall be one member for every thirty thousand or part thereof of the population;

(ii) XXX

(iii) Kodagu district, it shall be one member for every eighteen thousand or part thereof of the population.

**XX XX XX**

**167. Disqualification for members.-** (1) A person shall be disqualified for being chosen and for being member of a Zilla Panchayat,-

(a) if he is so disqualified by or under any law for the time being in force for the purposes of the elections to the State Legislature:

Provided that no person shall be disqualified on the ground that he is less than twenty five years, if he has attained the age of twenty-one years.

(b) if he has been sentenced by a criminal court to imprisonment for a term exceeding three months in respect of an offence under the Karnataka Excise Act , 1965 (Karnataka Act 21 of 1966), such sentence not having been subsequently reversed or quashed or the offence pardoned; or

(c) if an order has been passed against him under section 117 of the Code Of Criminal Procedure, 1973 (Central Act 2 of 1974) in proceedings instituted under section 110 of that code, such order not having been subsequently reversed or quashed ; or

(d) if he has been dismissed from service under any local authority; or

**XX XX XX**

**308AB. Notification of dates for nominations etc.–** (1) As soon as the notification of election to elect a member is issued, the Returning Officer shall, by notification in the Official Gazette, notify, –

(a) the last date for making nominations which shall be the fourth working day after the date of publication of the first mentioned notification or if that day is a public holiday, the next succeeding day which is not a public holiday;

(b) the date for the scrutiny of nominations, which shall be the day immediately following the last day for filing nominations or if that day is a public holiday, the next succeeding day which is not a public holiday;

(c) the last date for the withdrawal of nominations, which shall be the second day after the date of scrutiny of nominations or, if that day is a public holiday, the next succeeding day which is not a public holiday;

(d) the date or the dates on which a poll shall, if necessary, be taken or the first of which shall be a date not earlier than in the case of Gram Panchayat the fifth day, and in case of Taluk Panchayat and Zilla Panchayat the seventh day, after the last date for the withdrawal of candidature;

(e) the date before which the election shall be completed;

(f) The process of election of members to the panchayats shall, as far as may be, conclude within ten working days of the issue of the notification of election.

**XX XX XX**

**310. District Planning Committee.-** (1) The Government shall constitute in every district a District Planning Committee to consolidate the plans prepared by the Zilla Panchayats, Taluk Panchayats, Grama Panchayats, Town Panchayat, Municipal Council and Municipal Corporations in the district and to prepare a draft development plan for the district as a whole.

(2) The district planning committee shall consist of,-

(a) The Minister in charge of the concerned District -- **Member**

(b) The Adhyaksha of the Zilla Panchayat -- **Member**

(c) The presidents of the Taluk Panchayat who is the ex-officio co-chairperson of Taluk Planning and Development Committee --**Member**

(d) The vice-chairperson of the Taluk Planning and Development Committee (elected by Gram Panchayat of the taluk) from each Taluk in the district------------ **Member**

(e) such number of person not less than four fifth of the total number of members of committees as may be specified by the Government elected in the prescribed manner from amongst the members of the Zilla Panchayats, Taluk Panchayats, Town Panchayats and Councilors of the Municipal corporations and Municipal councils in the district in proportion to the ratio between population of the rural areas and urban areas in the District.

**XX XX XX**

(5) The chairman of the District Planning Committee shall be chosen among themselves in such manner as may be prescribed.

**XX XX XX**

**310B. Karnataka state decentralised planning and development Committee,–** (1) There shall be established a committee called the Karnataka State Decentralised Planning and Development Committee to enable the Government to formulate development plans and the annual economic review to be presented along with the budget document.

(2) The Karnataka state decentralized planning and development committee shall consist of,-

| | | |
|---|---|---|
| 1 | Chairperson | The Chief Minister |
| 2 | Vice-Chairperson | 1.The Minister for Rural Development and Panchayat Raj<br>2. The Finance Minister<br>3. The Minister Incharge of Planning<br>4. The Minister for Urban Development<br>One non-official Member who is an expert in the field of Socio-Economic Development nominated by the Government |
| 3 | Members: | 1. Development Commissioner of the State.<br>2. Principal Secretary, RDPR<br>3. Principal Secretary, Urban Development.<br>4. The Principal Secretary, Finance<br>5. Two MLCs representing the Local Bodies nominated by the Government<br>6. Eight Members nominated by the Government consisting of,-<br>(a) Two Chairpersons of The District Planning Committees one from each revenue division<br>(b) Two Chairpersons of the Taluk Planning and Development Committees - one from each revenue division<br>(c) Two Chairpersons of the Gram Panchayats- one from each revenue division<br>(d) Two Chairpersons of Urban Local Bodies one representing the City Corporations, one representing the City Municipal Councils or one representing Town Panchayats and one representing the Town Municipalities Provided |

| | | |
|---|---|---|
| | | that of the eight at least one shall be a woman, one representative of the Scheduled Castes, one a representative of the Scheduled Tribes and one a representative of the other backward classes including minority groups<br>(e) Five persons who are experts, from the fields of Agriculture and allied activities, Industry, Rural and Urban Development, Gender subjects (who shall be a woman), Child Rights who shall be a child rights activist, Finance, Town and Country Planning and Environment and Water Conservation nominated by the Government |
| 4 | Member Secretary | The Principal Secretary to Government or Secretary to Government in charge of Planning Department. |

**XX XX XX**

Govt. Press, Vikasa Soudha, Bengaluru, 17th March, 2022, P7, W.D. , Copies 500